**ಸಾಕ್ಷಿಯನ್ನು ದಿನಾಂಕಃ 29.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 6 ನೇ ಪ್ರತಿವಾದಿಗಳ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, 10 ನೇ ತರಗತಿಯಲ್ಲಿ ಅನುತ್ತೀರ್ಣನಾಗಿರುತ್ತೇನೆ. ನನ್ನ ತಾಯಿ ಆರೋಗ್ಯವಾಗಿದ್ದು ವ್ಯವಸಾಯ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಬೆನ್ನು ನೋವು ಆಗಿ ನಡೆಯಲು ಕಷ್ಟವಾಗುತ್ತಿದೆ ಎಂದು ನುಡಿಯುತ್ತಾರೆ. ನನಗೆ ಬರೆದುಕೊಟ್ಟ ನಿ.ಪಿ.–1 ಮುಖ್ತ್ಯಾರ್ ನಾಮದಲ್ಲಿ ಆ ರೀತಿ ನನ್ನ ತಾಯಿ ಅವರಿಗೆ ಬೆನ್ನು ನೋವು ಇರುವ ಬಗ್ಗೆ ತಿಳಿಸಿರುತ್ತಾರೆ. ಆ ರೀತಿ ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲದ ಬಗ್ಗೆ ಯಾವುದೇ ವೈದ್ಯಕೀಯ ದಾಖಲೆ ಹಾಜರುಪಡಿಸಿರುವುದಿಲ್ಲ, ಅಗತ್ಯವಿದ್ದಲ್ಲಿ ಹಾಜರುಪಡಿಸಬಹುದು. ವಂಶವೃಕ್ಷದಲ್ಲಿ ಅವರ ಕುಟುಂಬಕ್ಕೆ ಸಂಬಂಧಿಸಿದವರ ಹೆಸರನ್ನು ಮಾತ್ರ ಸೇರಿಸಬೇಕೆಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಕುಟುಂಬದ ವಂಶವೃಕ್ಷವನ್ನು ಮಾತ್ರ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ದಾವಾ ಪತ್ರದ ವಂಶವೃಕ್ಷದಲ್ಲಿ ನಾಗರಾಜಮ್ಮ ಕೋಂ ಲೇಟ್ ಬೋರಪ್ಪರವರ ವಂಶವೃಕ್ಷ ತಿಳಿಸಿದ್ದು ಆದರೆ ಬೋರಪ್ಪನವರ ವಂಶವೃಕ್ಷ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರ ವಂಶವೃಕ್ಷವನ್ನು ಕೊಡಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿ ನಾಗರಾಜಮ್ಮ ಹಾಗು ಬೋರಪ್ಪನವರ ಮಗಳು ಎಂದರೆ ಸರಿ. 7 ನೇ ಪ್ರತಿವಾದಿ ನನ್ನ ತಾಯಿಯ ತಮ್ಮನಾಗಿರುತ್ತಾರೆ. 7 ನೇ ಪ್ರತಿವಾದಿ ಯಾವುದೇ ಜಮೀನನ್ನು ಸಾಗುವಳಿ ಮಾಡುತ್ತಿಲ್ಲ. 7 ನೇ ಪ್ರತಿವಾದಿ ವಾಸ ಮಾಡುವ ಮನೆ ಅವರು ಕ್ರಯಕ್ಕೆ ಖರೀದಿಸಿದ ಸ್ವಂತ ಮನೆಯಾಗಿರುತ್ತದೆ. 7 ನೇ ಪ್ರತಿವಾದಿ ಕೂಲಿ ಮಾಡಿ

ಸಂಪಾದಿಸಿದ ಹಣದಿಂದ ಮನೆ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ ಅಂದರೆ ನನ್ನ ತಾಯಿಯ ತಂದೆಯಾದ ಬೋರಪ್ಪನವರಿಗೆ ಯಾವುದೇ ಆಸ್ತಿ ಇದ್ದಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ತಾತನ ಭಾಗಕ್ಕೆ ಅವರ ತಂದೆ ಯಾವುದೇ ಆಸ್ತಿ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನಾದ ಬೋರಪ್ಪನವರ ತಂದೆಯ ಹೆಸರು ಸಿದ್ದಪ್ಪ ಎಂಬುದಾಗಿರುತ್ತದೆ. ದಿನಾಂಕಃ 19.06.1967 ರಂದು ನನ್ನ ತಾತನಾದ ಬೋರಪ್ಪನವರು ಕಟ್ಟೇ ಹುಣಸೂರು ಗ್ರಾಮದ ಸ.ನಂ. 24 ರಲ್ಲಿ 02 ಎಕರೆ 03 ಗುಂಟೆ ಜಮೀನನ್ನು ಹೆಚ್.ಪಿ. ಕೆಂಪಣ್ಣ ಎನ್ನುವವರಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿ ಸದರಿ ಆಸ್ತಿಯ ಉತ್ತರಕ್ಕೆ ಸ್ವಲ್ಪ ಜಮೀನನ್ನು ಸಹ ಉಳಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದೇ ರೀತಿ ದಿನಾಂಕಃ 24.04.1970 ರಂದು ನನ್ನ ತಾತನಾದ ಬೋರಪ್ಪನವರು ಸದರಿ ಹೆಚ್.ಪಿ. ಕೆಂಪಣ್ಣ ಎನ್ನುವವರಿಗೆ ಕಟ್ಟೇ ಹುಣಸೂರು ಗ್ರಾಮದ ಸ.ನಂ. 26/2 ರಲ್ಲಿ 32 ಗುಂಟೆ ಜಮೀನನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿ ಸದರಿ ಆಸ್ತಿಯ ದಕ್ಷಿಣಕ್ಕೆ ಸ್ವಲ್ಪ ಜಮೀನನ್ನು ಸಹ ಉಳಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ನನ್ನ ತಾಯಿಯೇ ಮಾಹಿತಿ ನೀಡಿರುತ್ತಾರೆ. ಈ ದಾವೆಯ ಎಲ್ಲಾ ವಿಚಾರಗಳು ನನಗೆ ಗೊತ್ತಿರುತ್ತದೆ. ನನ್ನ ತಾಯಿಗೆ ಮದುವೆ ಮಾಡಿಸುವ ಸಮಯದಲ್ಲಿ ನನ್ನ ತಾತ ಹಾಗು ಅಜ್ಜಿ ಬೇರೆ ಮನೆಯಲ್ಲಿ ವಾಸಮಾಡಿಕೊಂಡಿದ್ದರು. ವಾದ ಪತ್ರದಲ್ಲಿ ಆ ರೀತಿ ನನ್ನ ತಾತ ಹಾಗು ಅಜ್ಜಿಗೆ ಸ್ವಂತ ವಾಸದ ಮನೆ ಇಲ್ಲದಿರುವ ಬಗ್ಗೆ ತಿಳಿಸಿರುತ್ತಾರೋ ಇಲ್ಲವೋ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ತಾಯಿಯಾದ ವಾದಿ ಹಾಗು 7 ನೇ ಪ್ರತಿವಾದಿ 1 ನೇ

ಪ್ರತಿವಾದಿಯ ಗಂಡನಾದ ಮುದ್ದುಮಾದಪ್ಪರವರ ವಂಶಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ರುದ್ರಪ್ಪರವರಿಗೆ ಒಬ್ಬ ಅಕ್ಕ ಇರುತ್ತಾರೆ. ಅವರನ್ನು ಕೆ.ಆರ್. ಪೇಟೆಗೆ ಕೊಟ್ಟು ಮದುವೆ ಮಾಡಿಸಿರುತ್ತಾರೆ. ನನ್ನ ತಾಯಿ ವಾದಿ ಹಾಗು 7 ನೇ ಪ್ರತಿವಾದಿ ನನ್ನ ತಾತನಾದ ಬೋರಪ್ಪನವರ ಒಟ್ಟು ಕುಟುಂಬದ ಸದಸ್ಯರಾಗುತ್ತಾರೆಯೇ ಹೊರತು 1 ನೇ ಪ್ರತಿವಾದಿಯ ಗಂಡನಾದ ಮುದ್ದುಮಾದಪ್ಪರವರ ಕುಟುಂಬದ ಸದಸ್ಯರಾಗುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಾತ ಬೋರಪ್ಪರವರ ವಂಶದಡಿಯಲ್ಲಿ ಬರುತ್ತಾರೆಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಒಟ್ಟು ಕುಟುಂಬದಲ್ಲಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. 2 ಹಾಗು 3 ನೇ ಪ್ರತಿವಾದಿಗಳು ಹಾಗು 4 ನೇ ಪ್ರತಿವಾದಿಯ ಗಂಡನಾದ ಸಿದ್ದಪ್ಪರವರು ಪ್ರತ್ಯೇಕವಾಗಿ ಮನೆ ಮಾಡಿಕೊಂಡು ವಾಸವಿರುತ್ತಾರೆಂದರೆ ಸಾಕ್ಷಿಯು ಹಿಂದೆ ಜೊತೆಯಲ್ಲಿಯೇ ವಾಸವಿದ್ದು ಈಗ ಖಾತೆ ಬದಲಿಸಿಕೊಂಡು ಪ್ರತ್ಯೇಕವಾಗಿ ವಾಸಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. 2 ಹಾಗು 3 ನೇ ಪ್ರತಿವಾದಿಗಳು ಹಾಗು 4 ನೇ ಪ್ರತಿವಾದಿಯ ಗಂಡನಾದ ಸಿದ್ದಪ್ಪರವರು ವ್ಯವಸಾಯ ಮಾತ್ರ ಮಾಡಿಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅವರುಗಳು ಒಟ್ಟು ಕುಟುಂಬದ ಆಧಾಯದಿಂದ ಬೇರೆ–ಬೇರೆ ಮನೆ ಮಾಡಿಕೊಂಡು ವಾಸವಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅವರುಗಳ ಸದರಿ ಮನೆ ಹಾಗು ಮನೆಯ ಹಿಂಭಾಗದ ಹಿತ್ತಲುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಹಾಗು 7 ನೇ ಪ್ರತಿವಾದಿ 1 ನೇ ಪ್ರತಿವಾದಿ ಗಂಡನಾದ ಮುದ್ದುಮಾದಪ್ಪರವರ ಕುಟುಂಬಕ್ಕೆ ಸೇರಿದವರಾಗಿಲ್ಲದೇ ಇದ್ದುದರಿಂದ ಅವರಿಗೆ ದಾವಾ ಆಸ್ತಿಯಲ್ಲಿ ಭಾಗ ಕೇಳುವ ಹಕ್ಕು

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಪತ್ರದಲ್ಲಿ ತಿಳಿಸಿರುವಂತೆ ನನ್ನ ತಾತ ಹಾಗು ಅಜ್ಜಿ ದಾವಾ ಸ್ವತ್ತಿನಲ್ಲಿ ಭಾಗ ಕೊಡುವುದಾಗಿ ವಾಗ್ದಾನ ಮಾಡಿರುವುದಾಗಿ ತಿಳಿಸಿದ್ದು, ದಾವಾ ಆಸ್ತಿಯಲ್ಲಿ ಅವರಿಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಆ ರೀತಿ ವಾಗ್ದಾನ ಮಾಡಲು ಸಹ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಿಭಾಗ ಕೋರಿ ಪಂಚಾಯಿತಿ ಮಾಡಿಸಿರುವುದಾಗಿ ದಾವಾ ಪತ್ರದಲ್ಲಿ ತಿಳಿಸಿದ್ದು ಸದರಿ ಪಂಚಾಯಿತಿಗೆ ಯಾರ್ಯಾರು ಹಾಜರಿದ್ದರು ಎಂದು ನನಗೆ ಗೊತ್ತಿರುತ್ತದೆ. ನನ್ನ ತಾಯಿ ದಾವಾ ಆಸ್ತಿಯ ಜಂಟೀ ಸ್ವಾಧೀನದಲ್ಲಿ ಇರುವ ಸಂಬಂಧ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದರೂ ಸಹ ಸತ್ಯಾಂಶ ಹೊರಬರುತ್ತದೆನ್ನುವ ಕಾರಣಕ್ಕಾಗಿ ಸುಳ್ಳು ಮುಖ್ತ್ಯಾರ್ ನಾಮೆಯನ್ನು ನನಗೆ ಬರೆದುಕೊಟ್ಟು ಈಗ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಗೆ ದಾವಾ ಆಸ್ತಿಯಲ್ಲಿ ಯಾವುದೇ ಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**